# ದೊಡ್ಡ ಸ್ವಾಮಿಯ ದೊಡ್ಡ ಮೂಟೆ



## ದೊಡ್ಡ ಸ್ವಾಮಿಯ ದೊಡ್ಡ ಮೂಟೆ

ಹೊಸದೊಡ್ಡಿ ಎಂಬ ಗ್ರಾಮಕ್ಕೆ ಸೇರಿದ ದೊಡ್ಡಸ್ವಾಮಿ ಎಂಬಾತನು ಒಂದು ಒಳ್ಳೆಯ ರೈತ. ಆದರೆ ಲೋಕದ ಪರಿಜ್ಞಾನವಿಲ್ಲದ ಸಾಮಾನ್ಯವ್ಯಕ್ತಿ ಆತನು ಒಂದೊಂದು ಸಾರಿಯು ತಾನು ಬೆಳೆದ ಬೆಳೆಯನ್ನು ಹತ್ತಿರದ ನಗರಕ್ಕೆ ತೆಗೆದುಕೊಂಡು ಹೋಗಿ ಮಾರಿದ ನಂತರ ತನಗೆ ಬೇಕಾದ ಸಾಮಗ್ರಿಗಳನ್ನು ಅಲ್ಲಿಯೇ ಖರೀದಿಸಿಕೊಂಡು ಮನೆಗೆ ತರುತ್ತಿದ್ದನು.ಹೀಗೆ ಒಂದು ಸಾರಿ ಪಟ್ಟಣಕ್ಕೆ ಹೋಗಿ ತನ್ನ ವ್ಯಾಪಾರವನ್ನು ಮುಗಿಸಿದ ನಂತರ ತನಗೆ ಬೇಕಾದ ಸಾಮಗ್ರಿಗಳನ್ನು ಮನೆಗೆ ಖರೀಸಿದನು. ತಾನು ಖರೀದಿಸಿದ ಎಲ್ಲಾ ವಸ್ತುಗಳನ್ನು ಒಂದು ಮೂಟೆಯಲ್ಲಿ ಗಂಟುಮಾಡಿ ಅದನ್ನು ತನ್ನ ತಲೆಯ ಮೇಲೆ ಹೊತ್ತು ಕೊಂಡನು.

ತನ್ನ ಗ್ರಾಮಕ್ಕೆ ಹೋಗುವ ಬಸ್ಸನ್ನು ಹತ್ತುವದಕ್ಕಾಗಿ ಬೇಗಬೇಗನೆ ಓಡಿದನು. ಆ ದಿನ ಹೆಚ್ಚು ಸಾಮಗ್ರಿಗಳನ್ನು ಖರೀದಿಸಿದರ ನಿಮಿತ ಹೆಚ್ಚು ಸಮಯವಾಗಿ ಬಿಟ್ಟಿತು. ತನ್ನ ಗ್ರಾಮಕ್ಕೆ ಹೋಗುವ ಕಡೇ ಬಸ್ಸನ್ನು ಬಿಟ್ಟುಬಿಟ್ಟರೆ ಮುಂದಿನ ಬಸ್ಸು ಬೆಳಗ್ಗೆಯೇ. ತನ್ನ ಗ್ರಾಮಕ್ಕೆ ಹೋಗ ಬೇಕಾದರೆ ಸುಮಾರು 15 ಕಿ.ಮೀ. ನಡೆಯಬೇಕು.

ಈ ದೊಡ್ಡಸ್ವಾಮಿ ವೇಗವಾಗಿ ಹೋದರು ಕೂಡ ಆ ಬಸ್ಸನ್ನು ಹಿಡಿಯಲು ಸಾಧ್ಯವಾಗಲಿಲ್ಲ. ಈಗ ಏನು ಮಾಡಬೇಕೆಂದು ಅರಿಯದೆ ನಿಂತಿದ್ದನು. ಅಷ್ಟುದೂರ ನಡೆಯುವದು ಸುಲಭವಲ್ಲ. ಆತನು ಬಳಲಿ ನಿಂತಿರುವ ಸಮಯದಲ್ಲಿ ಆ ಕಡೆಯಿಂದ ಒಂದು ಎತ್ತಿನ ಗಾಡಿ ಬರುತ್ತಿತ್ತು. ಅದನ್ನು ಆತ ಕೇಳಲು ಅದು ತನ್ನ ಗ್ರಾಮದ ಮೇಲೆ ಹಾದುಹೋಗುವದಾಗಿ ಇತ್ತು. ತನ್ನ ಒಂದು ಸ್ಥಿತಿಯನ್ನು ಆ ಗಾಡಿ ಓಡಿ ಸುವವನ ಬಳಿ ತಿಳಿಸಿದರಿಂದ ಅವನು ಈತನ ಸನ್ನಿವೇಶವನ್ನು ಕಂಡು "ಮನುಷ್ಯನಿಗೆ ಮನುಷ್ಯನು ಇದನ್ನು ಕೂಡ ಮಾಡದಿದ್ದರೆ ಹೇಗೆ?"ಎಂದು ಹೇಳಿ ತನ್ನ ಗಾಡಿಗೆ ಹತ್ತಿಸಿಕೊಂಡನು. ದೊಡ್ಡ ಸ್ವಾಮಿಯೂ ಗಾಡಿಯ ಹಿಂಭಾಗದಲ್ಲಿ ಹತ್ತಿಕೊಂಡನು.

ಇಬ್ಬರು ದಾರಿ ಉದ್ದಕ್ಕೂ ಮಾತಾಡುತ್ತಲೇ ಹೊರಟರು. ದೊಡ್ಡ ಸ್ವಾಮಿ ಗಾಡಿಯ ಹಿಂಭಾಗದಲ್ಲಿ ಹತ್ತಿ ಕುಳಿತ್ತಿದ್ದರ ನಿಮಿತ ಓಡಿಸುವವನು ಅವರನ್ನು ಸರಿಯಾಗಿ ಗಮನಿಸಲು ಆಗಿರಲಿಲ್ಲ, ಅವನು ಮಾತಾಡುತ್ತಾ ಹಿಂತಿರುಗಿ ನೋಡಿದಾಗ ಬಹು ಆಶ್ಚರ್ಯಪಟ್ಟನು. ಯಾಕೆಂದರೆ. ಗಾಡಿಯಲ್ಲಿ ಇದ್ದಂತ ದೊಡ್ಡಸ್ವಾಮಿಯು ತನ್ನ ಮೂಟೆಯನ್ನು ಇನ್ನೂ ತಲೆಯಲ್ಲೆ ಹೊತ್ತುಕೊಂಡಿದ್ದನು. ಗಾಡಿ ಓಡಿಸುವವನು ಅವನನ್ನು ನೋಡಿ, "ಇಷ್ಟೊತ್ತು ಗಂಟನ್ನು ತಲೆಯ ಮೇಲೆ ಹೊತ್ತುಕೊಂಡಿದ್ದೀರಲ್ಲ ಯಾಕೆ ಅದನ್ನು ಇಳುಗಿಸಿ ಇಟ್ಟಿದ್ದರೆ ನಿಮ್ಮ ಭಾರ ಹಗುರವಾಗುತ್ತಿತ್ತಲ್ಲವೆ" ಅಂದನು. ಅದಕ್ಕೆ ಪ್ರತ್ಯುತ್ತರವಾಗಿ ದೊಡ್ಡಸ್ವಾಮಿ, "ಸ್ವಾಮಿ, ನೀವು ದೊಡ್ಡ ಮನಸು ಮಾಡಿ ನನ್ನನ್ನು ನಿಮ್ಮ ಗಾಡಿಯಲ್ಲಿ ಹತ್ತಿಸಿಕೊಂಡಿರಿ, ನಾನು ನನ್ನ ಭಾರವನ್ನು ಅದರಲ್ಲಿ ಇಟ್ಟರೆ ಅದು ಎಷ್ಟು ಕಷ್ಟಕರವಾಗಿರುತ್ತದೆ. ಎತ್ತುಗಳು ಬಳಲಿಹೋಗುವದಲ್ಲವೆ?" ಎಂದು ಹೇಳಿದನು.

ಇದನ್ನು ಓದಿದ ನನ್ನ ಪ್ರೀಯ ಸ್ನೇಹಿತರುಗಳೆ ಇಂದಿಗೆ ನಾವು ಆ ದೊಡ್ಡಸ್ವಾಮಿಯ ಹಾಗೆ ಇದ್ದೇವೆ.

ಇಂದಿಗೆ ಲೋಕವೇ ಭಾರವನ್ನು ಹೊರುವ ಮನುಷ್ಯರಿಂದ ತುಂಬಿ ಕೊಂಡಿದೆ. ಒಬ್ಬೊಬ್ಬರಿಗೂ ಒಂದೊಂದು ವಿಧವಾದ ಭಾರಗಳು. ಕೆಲವರಿಗೆ ಭವಿ ಷ್ಯವನ್ನು ಕುರಿತು ಭಾರ,ಕೆಲವರಿಗೆ ಮಕ್ಕಳ ಮೇಲಿನ ಭಾರ,.ಇನ್ನು ಕೆಲವರಿಗೆ ಕುಂಟುಬದ ಮೇಲಿನ ಭಾರ, ಇನ್ನೂ ಕೆಲವರಿಗೆ ತನ್ನ ರೋಗಗಳ ಮೇಲೆ, ತಮ್ಮ ಬಲಹೀನತೆಗಳ ಮೇಲೆ ಭಾರ, ಇಂತಹ ಎಷ್ಟೆಷ್ಟೋ ಭಾರಗಳನ್ನು ಮನುಷ್ಯನು ತನ್ನ ಜೀವಿತದಲ್ಲಿ ಹೊತ್ತುಹೊತ್ತು ಸಾಕಾಗಿ ಹೋಗುತ್ತಾನೆ.

ದೇವರಾದ ಯೇಸುಕ್ರಿಸ್ತನು ಇಂತವರುಗಳನ್ನು ಕಂಡು "ಎಲೈ ಹೊರೆ ಹೊತ್ತು ಕಷ್ಟಪಡುವವರೆ ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ ನಾನು ನಿಮಗೆ ವಿಶ್ರಾಂತಿಯನ್ನು ಕೊಡುತ್ತೇನೆ" ಎಂದು ನುಡಿದಿದ್ದಾನೆ.

ಪ್ರಿಯರೇ, ಈ ಮಾತನ್ನು ಹೇಳಿದಂತದ್ದು, ಸಾಮಾನ್ಯವಾದ ಒಬ್ಬ ವ್ಯಕ್ತಿಯಲ್ಲ, ನಾವು ಜೀವಿಸುತ್ತಿರುವ ಈ ಲೋಕವನ್ನು ಉಂಟುಮಾಡಿ ಅದನ್ನು ಆಳುತ್ತಿರುವ ಸೃಷ್ಟಿಕರ್ತನೇ ಇದನ್ನು ನುಡಿದಿದ್ದಾನೆ.

ನಮ್ಮ ಮನಸ್ಸಿನಲ್ಲಿ ಉಂಟಾಗುವ ವೇದನೆಗಳನ್ನು, ಭಾರಗಳನ್ನು ಯಾರ ಬಳಿಯಲ್ಲಿ ಹೇಳಿಕೊಂಡರೆ ಸಾಕು ನಮಗೆ ಸ್ವಲ್ಪ ಶಮನವುಂಟಾಗುತ್ತದೆ ಎಂದು ತಾನೆ ತಿಳಿದುಕೊಂಡಿದ್ದೇವೆ. ಆದರೆ ನಮ್ಮ ಮನಸ್ಸಿನ ಭಾರಗಳನ್ನು ವಿಚಾರಿಸಿ, ಕಷ್ಟಗಳನ್ನು ನೀಗಿಸುವ ಒಬ್ಬಾತನೆ ಯೇಸುಕ್ರಿಸ್ತನು.

ನಿನ್ನ ಕಷ್ಟಕಾಲದಲ್ಲಿ ನನ್ನನ್ನು ಕೂಗು, ನಾನು ನಿನಗೆ ಸಹಾಯ ಮಾಡುತ್ತೇನೆ ಎಂದು ಮನುಷ್ಯರುಗಳು ಯಾರು ಕೂಡ ಮುಂದಾಗಿ ಹೇಳುವದಿಲ್ಲ. ಆದರೆ ನಮ್ಮನ್ನು ಉಂಟುಮಾಡಿದ ದೇವರು, ನಮ್ಮ ಭಾರವನ್ನು ಇಳುಗಿಸಲು ನಮ್ಮನ್ನು ಕರೆಯುತ್ತಾನೆ.

ದೇವರಾದ ಯೇಸು ಕ್ರಿಸ್ತನು ಹೊರೆ ಹೊರುವ ಒಂದು ದೊಡ್ಡ ವ್ಯಕ್ತಿ. ಆತನು ಶಿಲುಬೆಯಲ್ಲಿ ನಮ್ಮ ಪಾಪಗಳನ್ನು, ಶಾಪಗಳನ್ನು, ರೋಗಗಳನ್ನು ಹೊತ್ತುಬಿಟ್ಟನು. ಆತನು ಹೊತ್ತುಕೊಂಡದನ್ನು ನಾವು ಆ ಗ್ರಾಮದ ವ್ಯಕ್ತಿಯಂತೆ ಹೊತ್ತುಕೊಳ್ಳಬೇಕಾದ ಅವಶ್ಯವಿಲ್ಲ.

ಇದನ್ನು ಓದುವ ನನ್ನ ಪ್ರೀಯ ಸ್ನೇಹಿತರುಗಳೆ ನಿಮ್ಮ ಭಾರ ಏನಾಗಿದ್ದರು ಅದನ್ನು ಇಂದಿಗೆ ಯೇಸುವಿನ ಮೇಲೆ ಹಾಕಿಬಿಡಿರಿ. ಆತನು ಎಲ್ಲವನ್ನು ಹೊತ್ತುಕೊಳ್ಳಲು ಸಿದ್ಧನಾಗಿದ್ದಾನೆ.

ಯೇಸುವಿನ ಮೇಲೆ ನಿಮ್ಮ ಭಾರವನ್ನು ಹಾಕುವಾಗ, ಆತನು ನಿಮ್ಮನು ಹೊತ್ತುಕೊಳ್ಳುವನು, ನಿಮಗೆ ವಿಶ್ರಾಂತಿಯನ್ನು ಕೊಡುವನು.

"ನಿಮ್ಮ ಚಿಂತೆಯನ್ನೆಲ್ಲಾ ಆತನ ಮೇಲೆ ಹಾಕಿರಿ, ಆತನು ನಿಮಗೋಸ್ಕರ ಚಿಂತಿಸುತ್ತಾನೆ." (1ಯೋಹಾನ 5:7)

ಈ ಪತ್ರಿಕೆಯ ಮೂಲಕ ನೀವು ಯೇಸು ಕ್ರಿಸ್ತನನ್ನು ಅಂಗೀಕರಿಸಿ ಕೊಂಡಿದ್ದೇ ಆದರೆ ಆತನ ಬಗ್ಗೆ ಇನ್ನೂ ತಿಳಿಯಲು ಇಚ್ಛಿಸಿ ಪುಸ್ತಕ ಮತ್ತು ಸಿ.ಡಿಗಳನ್ನು ಪಡೆಯಲು ನಮ್ಮ ಈ ಕೆಳಕಂಡ ವಿಳಾಸಕ್ಕೆ ಸಂಪರ್ಕಿಸಿ.

**VOICE OF JESUS PUBLICATIONS**
P.O.Box:6,Ramanathapuram.623501. S.Inidia.
Phone: 98941 31211- 94423 22264
Email: vojpulication@gmail.com

**VOICE OF JESUS MEDIA**
P.O.Box:7206,Bangalore- 560 072. Ph: 9731722977
Email: vojmedia@gmail.com

ಈ ಕರಪತ್ರಿಕೆಯನ್ನು ಉಚಿತವಾಗಿ ನೀಡಲಾಗುತ್ತದೆ ಮಾರಾಟ ಮಾಡುವುದಿಲ್ಲ

VOJ.TRACTS/2013/KANNADA